ಹನಿ

# ಅರಮನೆಯ ಸೊಸೆ

ಬ್ರಿಟನ್ನಿನ ಬಿಳಿಯರ ಅರಸೊತ್ತಿಗೆಗೆ ಹೊಸ ಕಪ್ಪು ಸದಸ್ಯೆಯ ಸೇರ್ಪಡೆ ಆಗಿದೆ. ಅಮೆರಿಕನ್ ನಟಿ ಮೇಘನ್ ಮಾರ್ಕಲ್, ರಾಜಕುಮಾರ ಹ್ಯಾರಿಯ ಕೈಹಿಡಿದು ರಾಜಮನೆತನದ ಸೊಸೆಯಾಗಿ ಇಂಗ್ಲೆಂಡಿನ ವಿಂಡ್ಸರ್ ಅರಮನೆ ಪ್ರವೇಶಿಸಿದ್ದಾಳೆ. ಈಗ ಆಕೆ ಡ್ಯೂಚಸ್ ಆಫ್ ಸಸೆಕ್ಸ್. ಆಫ್ರಿಕನ್ ಮೂಲದ ಅಮೆರಿಕನ್ ಪ್ರಜೆ ಮೇಘನ್, ಟಿವಿ ಸೀರಿಯಲ್ ಮತ್ತು ಸಿನಿಮಾಗಳಲ್ಲಿ ತನ್ನ ಬಿಡುಬೀಸಿನ ನಟನೆಯಿಂದ ಹೆಸರು ಮಾಡಿದದವಳು. ಪ್ರಖರ ಸ್ತ್ರೀವಾದಿ ಎಂಬ ಹೆಸರನ್ನೂ ಪಡೆದವಳು. ಮೊನ್ನೆ ಮದುವೆಯ ದಿನ ಚರ್ಚ್‌ನೊಳಕ್ಕೆ ಪ್ರವೇಶಿಸುವಾಗ ಸಂಪ್ರದಾಯವನ್ನು ಮುರಿದದ್ದೂ ಚರ್ಚೆಗೆ ಗ್ರಾಸವಾಗಿದೆ. ಮದುವೆಯ ಸಂಪ್ರದಾಯದಂತೆ ಆಕೆ ತಂದೆಯ ಜೊತೆಗೆ ಅಥವಾ ಕುಟುಂಬದ ಇನ್ನೊಬ್ಬ ಗಂಡಸಿನ ಜತೆಯಾಗಿ ಚರ್ಚ್ ಪ್ರವೇಶಿಸಬೇಕಿತ್ತು. ಆದರೆ ಮಾರ್ಕಲ್ ಏಕಾಂಗಿಯಾಗಿ ಚರ್ಚ್ ಒಳಪ್ರವೇಶಿಸಿದಳು. ಸ್ವಲ್ಪ ದೂರದ ಬಳಿಕ ಆಕೆಯ ಭಾವಿ ಮಾವ ಪ್ರಿನ್ಸ್ ಚಾರ್ಲ್ಸ್ ಆಕೆಗೆ ಜತೆಯಾದ.

ರಾಜಕುಮಾರ ಹ್ಯಾರಿ, ಚಾರ್ಲ್ಸ್ ಮತ್ತು ಡಯಾನಾ ದಂಪತಿಯ ಮಗ. ತಾಯಿ ಡಯಾನಾಳಂತೆಯೇ ಈತನೂ ಅರಮನೆಯ ಕಟ್ಟಳೆಗಳ ಬಗ್ಗೆ ಅತೀವ ಭಕ್ತಿಭಾವ ಇಟ್ಟುಕೊಂಡವನಲ್ಲ. ಇಲ್ಲವಾದಲ್ಲಿ ಜಗತ್ತಿನಾದ್ಯಂತ ವಸಾಹತುಗಳನ್ನು ನಿರ್ಮಿಸಿ ಕರಿಯರನ್ನು ಆಳುತ್ತಿದ್ದ ಬಿಳಿಯರ ಈ ಅರಸೊತ್ತಿಗೆಗೆ ಕರಿಯ ಹೆಣ್ಣೊಬ್ಬಳು ವಧುವಾಗಿ ಬರುವುದು ಅಷ್ಟು ಸುಲಭವಿರಲಿಲ್ಲ. ಬ್ರಿಟನ್ನಿನ ಅರಸೊತ್ತಿಗೆ ಪ್ರಜಾಪ್ರಭುತ್ವ ಜಗತ್ತಿನ ಆಧುನಿಕತೆಗೆ ಮುಕ್ತವಾಗಿ ತೆರೆದುಕೊಳ್ಳುತ್ತಿರುವುದರ ಸಂಕೇತ ಈ ಮದುವೆ. ಮೊನ್ನೆ ಮದುವೆ ನಡೆಯುತ್ತಿದ್ದಾಗ ರಾಣಿ ಎರಡನೆಯ ಎಲಿಜಬೆತ್‌ಗೆ ಎದುರಾಗಿ ಕುಳಿತಾಕೆ ಮೇಘನ್‌ನ ತಾಯಿ ಡೊರಿಯಾ ರಾಗ್ಲಂಡ್. ಈಕೆಯ ಅಜ್ಜಿ ದಕ್ಷಿಣ ಅಮೆರಿಕಾದ ಬಿಳಿಯರ ತೋಟದಲ್ಲಿ ಕೂಲಿಯಾಳಾಗಿ ದುಡಿದ ಗುಲಾಮರ ವಂಶಕ್ಕೆ ಸೇರಿದವಳು. ಮದುವೆ ನಡೆಯುತ್ತಿದ್ದರೆ ಕರಿಯರ ಜಗತ್ತಿನ ಸೂಪರ್‌ಸ್ಟಾರ್‌ಗಳೆಲ್ಲ ಹಾಜರಿದ್ದರು. ಓಪ್ರಾ ವಿನ್‌ಫ್ರೇ, ಸೆರೆನಾ ವಿಲಿಯಮ್ಸ್, ಅಮಲ್ ಕ್ಲೂನಿ, ಗೆಳತಿ ಪ್ರಿಯಾಂಕಾ ಚೋಪ್ರಾ ಮದುಮಗಳ ಸುತ್ತ ನೆರೆದಿದ್ದರೆ, ಅರಮನೆಯ ಹೊರಗೆ ಬೀದಿಯಲ್ಲಿ ಹೂಸ್ಟನ್ ಮತ್ತು ಅಟ್ಲಾಂಟಾದಿಂದ ಬಂದಿದ್ದ ಕರಿಯ ಸುಂದರಿಯರ ದೊಡ್ಡ ದಂಡೇ ನಿಂತಿತ್ತು. ಕಪ್ಪು ಹುಡುಗಿಯೊಬ್ಬಳು ಬಿಳಿಯರ ಅರಸೊತ್ತಿಗೆಯ ವಧುವಾಗುವ ಸಂಭ್ರಮವನ್ನು ಕಂಡು ಕೆಲವರು ಆನಂದಭಾಷ್ಪ ಸುರಿಸಿದರು. ಮದುವೆಗೆ ಪುರೋಹಿತನಾಗಿದ್ದ ಚಿಕಾಗೊ ಸಂಜಾತ ಬಿಷಪ್ ಮೈಕೆಲ್ ಕರಿ ಭಾವುಕನಾಗಿ 'ನಾವು ನಿಜವಾದ ಅಧಿಕಾರದ ಬಗ್ಗೆ ಮಾತನಾಡುತ್ತಿದ್ದೇವೆ. ಜಗತ್ತನ್ನು ಬದಲಿಸುವ ಅಧಿಕಾರ, ಇದು ಪ್ರೀತಿಯ ಅಧಿಕಾರ' ಎಂದದ್ದೂ ದೊಡ್ಡ ಸುದ್ದಿಯಾಗಿದೆ.

36ರ ಹರೆಯದ ಮೇಘನ್ ಮಾರ್ಕಲ್ ಗೆ (ಬರ್ತ್‌ಡೇ 4/8/1981) ಇದು ಎರಡನೆಯ ಮದುವೆ. ತಂದೆ ಥಾಮಸ್ ಮಾರ್ಕಲ್ ಟಿವಿ ಲೈಟಿಂಗ್ ಡೈರೆಕ್ಟರ್ ಆಗಿದ್ದರೆ, ತಾಯಿ ಸಮಾಜ ಸೇವಕಿ. ಮೇಘನ್ 6 ವರ್ಷದ ಬಾಲಕಿ ಆಗಿದ್ದಾಗ ತಂದೆ–ತಾಯಿ ಡೈವೋರ್ಸ್ ಮಾಡಿಕೊಂಡರು. ಶೂಟಿಂಗ್ ಸ್ಟುಡಿಯೋಗಳಲ್ಲಿ ಅಡ್ಡಾಡುತ್ತಿದ್ದ ಮೇಘನ್, ಸಹಜವಾಗಿಯೇ ನಟನೆಯತ್ತ ಆಕರ್ಷಿತಳಾದಳು. ರಂಗಭೂಮಿ ಮತ್ತು ಅಂತರರಾಷ್ಟ್ರೀಯ ಅಧ್ಯಯನದಲ್ಲಿ ಡಿಗ್ರಿ ಮುಗಿಸಿದಳು. ಅಭಿನಯದ ಜತೆಗೆ ಫ್ಯಾಷನ್ ಜಗತ್ತು ಪ್ರವೇಶಿಸಿದಳು. ಈಕೆ ಮುಖ್ಯ ಸಂಪಾದಕಿಯಾಗಿ ಆರಂಭಿಸಿದ 'ದಿ ಟಿಗ್' ಎಂಬ ಲೈಫ್‌ಸ್ಟೈಲ್ ವೆಬ್‌ಸೈಟ್ ಸಾಕಷ್ಟು ಜನಪ್ರಿಯವೂ ಆಗಿತ್ತು. 'ಸೂಟ್ಸ್' ಟಿವಿ ಧಾರಾವಾಹಿಯಲ್ಲಿ ಈಕೆಯ ನಟನೆ ವಿಮರ್ಶಕರ ಮೆಚ್ಚುಗೆ ಗಳಿಸಿತು. ಟಿವಿ ಧಾರಾವಾಹಿಯ ಪ್ರತಿ ಎಪಿಸೋಡ್‌ನ ನಟನೆಗೆ 50 ಸಾವಿರ ಡಾಲರ್ ಸಂಭಾವನೆ ಪಡೆಯುತ್ತಿದ್ದುದು ಈಕೆಯ ಜನಪ್ರಿಯತೆಗೆ ಸಾಕ್ಷಿ.

ನಟ ನಿರ್ಮಾಪಕ ಟ್ರೆವರ್ ಎಂಗಲ್‌ಸನ್ ಸ್ನೇಹವಾದದ್ದು 2004ರಲ್ಲಿ. 2011ರಲ್ಲಿ ಇಬ್ಬರೂ ಮದುವೆಯಾದರು. ಆದರೆ 2013ರಲ್ಲಿ ಡೈವೋರ್ಸ್ ಆಯಿತು. ರಾಜಕುಮಾರ ಹ್ಯಾರಿಯ ಸ್ನೇಹವಾದದ್ದೂ ಒಂದು ವಿಚಿತ್ರ ಸನ್ನಿವೇಶದಲ್ಲಿ. ಮೊದಲ ಬಾರಿಗೆ ಗೆಳತಿಯರ ಸಲಹೆಯಂತೆ ಭೇಟಿಯಾದಾಗ ಇಬ್ಬರಿಗೂ ಪರಸ್ಪರ ಪರಿಚಯ ಇರಲಿಲ್ಲ. ಅದೊಂದು ಬ್ಲೈಂಡ್ ಡೇಟಿಂಗ್! ಆದರೆ ಮೊದಲ ಭೇಟಿಯಲ್ಲೇ ಸ್ನೇಹ ಗಟ್ಟಿಯಾಯಿತು. 2017ರಲ್ಲಿ ಎಂಗೇಜ್‌ಮೆಂಟ್ ಆದದ್ದು ಈಗ ಮದುವೆ ಮುಗಿದಿದೆ.

ಅರಸೊತ್ತಿಗೆಯ ಮದುವೆಯ ಬಳಿಕ ಮೇಘನ್ ತನ್ನ ಜೀವನ ಶೈಲಿಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಿದೆ. ಹೊಸ ರಾಜಕುಮಾರಿಯ 'ಇಲ್ಲ'ಗಳ ಪಟ್ಟಿ ದೊಡ್ಡದಿದೆ. ಈವರೆಗೆ ಮಾಡುತ್ತಿದ್ದಂತೆ ಇನ್ನು ಮುಂದೆ ಮೇಘನ್ ಅಟೊಗ್ರಾಫ್‌ಗೆ ಸಹಿ ಹಾಕುವಂತಿಲ್ಲ. ಅಭಿಮಾನಿಗಳ ಜತೆಗೆ ಸೆಲ್ಫೀ ತೆಗೆದುಕೊಳ್ಳುವಂತಿಲ್ಲ. ಸಾಮಾಜಿಕ ಮಾಧ್ಯಮಗಳಿಂದ ದೂರ ಇರಬೇಕು. (ಈಗಾಗಲೆ ಆಕೆಯ ಇನ್‌ಸ್ಟಾಗ್ರಾಮ್ ಖಾತೆ ಸ್ಥಗಿತಗೊಂಡಿದೆ.) ಉಗುರಿಗೆ ಕಪ್ಪು ಬಣ್ಣ ಬಳಿಯುವಂತಿಲ್ಲ. ಈಗಿನ ರಾಣಿ ಮಾಡುವಂತೆ ಯಾವುದೇ ತೆಳುಬಣ್ಣದ ಪಾಲಿಶ್ ಮಾಡಿಕೊಳ್ಳಬಹುದು. ಇನ್ನು ಮುಂದೆ ಟೀವಿ, ಸಿನಿಮಾಗಳಲ್ಲಿ ನಟಿಸುವಂತಿಲ್ಲ. (ಈಗಾಗಲೆ ನಟನೆಗೆ ವಿದಾಯ ಹೇಳಿಯಾಗಿದೆ.) ಅಧಿಕೃತ ಸಮಾರಂಭದಲ್ಲಿ ಬರಿಗಾಲನ್ನು ತೋರುವ ಡ್ರೆಸ್ ಹಾಕಿಕೊಳ್ಳುವಂತಿಲ್ಲ. ಮಿನಿಸ್ಕರ್ಟ್ ಧರಿಸುವಂತಿಲ್ಲ.

ಮದುಮಗಳಿಗೆ ಅರಮನೆಯ ರಿವಾಜುಗಳನ್ನು ಕಲಿಸಲು ಆರು ತಿಂಗಳ ಅವಧಿ ನಿಶ್ಚಯವಾಗಿದೆ. ರಾಣಿಯ ಪ್ರೈವೇಟ್ ಸೆಕ್ರೆಟರಿ, ಅರಮನೆಯ ಸಲಹೆಗಾರ್ತಿ ಸಮಂತಾ ಕೊಹೆನ್‌ಗೆ ಈ ಕೆಲಸ ವಹಿಸಲಾಗಿದೆ. ಈಕೆಗೆ ಕಟ್ಟುನಿಟ್ಟಿನ ಅಧಿಕಾರಿ ಎಂಬ ಬಿರುದು ಈಗಾಗಲೆ ಇದೆ.

ಅರಮನೆಯ ಸೊಸೆ ಆಗುವುದೆಂದರೆ ಸುಮ್ಮನೆ ಅಲ್ಲ! ಅಂದ ಹಾಗೆ, ಮದುಮಕ್ಕಳು ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಫಿಜಿ, ಟೊಂಗಾ ಗಳಿಗೆ ಪ್ರವಾಸ ಹೋಗಲಿದ್ದಾರೆ.



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65